# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1809 /2023

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | ರಾಧ |
| ಗಂಡನ ಹೆಸರು | ಧನಂಜಯ |
| ವಯಸ್ಸು | 30 |
| ಉದ್ಯೋಗ | ಗೃಹಿಣಿ |
| ವಿಳಾಸ | ದಾಸಪ್ಪನಪಾಳ್ಯ |

**ದಿನಾಂಕಃ 05.01.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-2 ರಿಂದ 8 ರವರ ಪರಿಚಯ ಇರುತ್ತಾರೆ. 1 ನೇ ಆರೋಪಿ ನನ್ನ ಗಂಡ ಆರೋಪಿಗಳು ಪರಿಚಯ ಇರುತ್ತಾರೆ. ದಿನಾಂಕ 24.05.2015 ರಂದು ನನ್ನ ಹಾಗೂ 1 ನೇ ಆರೋಪಿಯ ಮದುವೆಯು ರಾಮನಗರದ ವಿಶ್ವನಾಥ ಚೌಲ್ಟ್ರಿಯಲ್ಲಿ ಜರುಗಿರುತ್ತದೆ. ಮದುವೆ ಸಮಯದಲ್ಲಿ ಆರೋಪಿಗಳು 100 ಗ್ರಾಂ ಚಿನ್ನ ಹಾಗೂ 1 ಸೈಟ್ ಅನ್ನು ಕೇಳಿದ್ದರು ನಾವು 70 ಗ್ರಾಂ ಚಿನ್ನವನ್ನು ಕೊಟ್ಟಿದ್ದೆವು, ಮದುವೆಯನ್ನು ನಾವೆ ಮಾಡಿರುತ್ತೇವೆ. ಮದುವೆ ನಂತರ ನಾವು ಗವಿನಾಗಮಂಗಲದಲ್ಲಿ ವಾಸ ಇದ್ದೆವು. ಮದುವೆಯಾದ 3 ವರ್ಷಗಳ ಕಾಲ ನನ್ನನ್ನು ಚೆನ್ನಾಗಿಯೇ ನೋಡಿ ಕೊಂಡಿರುತ್ತಾರೆ. ಒಂದು ಮಗು ಆದ ನಂತರ ಪುನಃ ಗರ್ಭಿಣಿ ಆದ ನಂತರ ತಾಯಿ ಮನೆಗೆ ಕರೆದುಕೊಂಡು ಬಂದು ಬಿಟ್ಟಿರುತ್ತಾರೆ, ಅಲ್ಲಿ ಬಿಟ್ಟ ನಂತರ ಡಿಲಿವರಿ ಆದ ನಂತರ ಬಂದು

ನೋಡಿಕೊಂಡು ಹೋಗಿರುತ್ತಾರೆ ನಂತರ ಆರೋಪಿಗಳು ಬಂದೇ ಇರುವುದಿಲ್ಲ. ನಂತರ ಪಂಚಾಯ್ತಿ ಎಲ್ಲಾ ಮಾಡಿ ಸೇರಿಸಲು ಪ್ರಯತ್ನ ಪಟ್ಟಲೂ ನನ್ನನ್ನೂ ಸೇರಿಸಿಕೊಂಡಿರುವುದಿಲ್ಲ, ನನ್ನ ಪಾಪುಗೆ 8 ತಿಂಗಳು ಇದ್ದಾಗ ವಿಚ್ಛೇಧನ ನೋಟೀಸನ್ನು ಕಳುಹಿಸಿದ್ದರು ನಂತರ ನಾನು ಮಹಿಳಾ ಪೋಲಿಸ್ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇನೆ. ಆರೋಪಿಗಳು ವರದಕ್ಷಿಣೆ ತರಲು ನನಗೆ ಚಿತ್ರಹಿಂಸೆ ನೀಡುತ್ತಿದ್ದರು. ದೂರನ್ನು ಕೊಟ್ಟ ನಂತರ ಮಹಜರ್ ಗೆ ಹೋಗಿರುತ್ತೇವೆ.

ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು ಕೊಟ್ಟ ನಂತರ ಗವಿನಾಗಮಂಗಲಕ್ಕೆ ಹೋಗಿ ವಿಚಾರಣೆಯನ್ನು ಮಾಡಿರುತ್ತಾರೆ. ಅಲ್ಲಿಗೆ ಸಾಕ್ಷಿದಾರರಾದ ವೆಂಕಟೇಶ್ ಮತ್ತು ಸಿದ್ದರಾಜುರವರು ಬಂದಿದ್ದರು. ಆಗ ಸಮಯ 12.30 ರಿಂದ 1.00 ಗಂಟೆ ಆಗಿತ್ತು. ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಸಮಯದಲ್ಲಿ ಪೋಟೋ, ಲಗ್ನ ಪತ್ರಿಕೆ ಹಾಗೂ ಒಡವೆ ಚೀಟಿಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ಪೋಟೋ, ಲಗ್ನಪತ್ರಿಕೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿರಸಿದ್ದು ಲಗ್ನ ಪತ್ರಿಕೆಯನ್ನು ನಿಪಿ-3 ಎಂದು, ಪೋಟೋಗಳನ್ನು ನಿಪಿ-4 , ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಜೆ ಪಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಪಿ ಯು ಸಿ

ಎಂದು ನುಡಿಯುತ್ತಾರೆ. ಕನ್ನಡ ಓದಲು ಮತ್ತು ಬರೆಯಲು ಬರುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರನ್ನು ಬೆರಳಚ್ಚುಮಾಡಿದರವರು ಯಾರು ಮತ್ತು ಎಲ್ಲಿ ಎಂದರೆ ಸಾಕ್ಷಿ ನಾನೇ ಬರೆದುಕೊಟ್ಟಿದ್ದೆನು ಎಂದು ನುಡಿಯುತ್ತಾರೆ. ಸದರಿ ಬೆರಳಚ್ಚು ಮಾಡಿಸಲು ಮಾಹಿತಿಯನ್ನು ನಿಮ್ಮ ವಕೀಲರು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ಮಧ್ಯಸ್ಥಗಾರರು ವಿಚಾರಣೆ ಮಾಡಿರುತ್ತಾರೆ ಎಂದು ಬರೆದಿರುತ್ತೀರಿ ಎಂದರೆ ಸ ಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮದ್ಯಸ್ಥಗಾರರು ಯಾರು ಎಂದು ಅವರ ಹೆಸರು ಮತ್ತು ವಿಳಾಸ ದೂರಿನಲ್ಲಿ ಬರೆದಿರುತ್ತೀರಾ ಎಂದರೆ ಸಾಕ್ಷಿ ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿಯವರು ಸಿದ್ದರಾಜು, ವೆಂಕಟೇಶ್ ಎಂದು ನುಡಿಯುತ್ತಾರೆ. ಮಧ್ಯಸ್ಥಗಾರರ ಸಮಕ್ಷಮ 70 ಗ್ರಾಂ ಚಿನ್ನ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಸತ್ಯ ಇರುತ್ತದೆ ಎಂದು ನುಡಿಯುತ್ತಾರೆ. ಪೋಲಿಸರಿಗೆ ನೀಡಿರುವ ಹೇಳಿಕೆಯಲ್ಲಿ ಇಂಥಹ ಮಧ್ಯಸ್ಥಗಾರರ ಮುಂದೆ 70 ಗ್ರಾಂ ಚಿನ್ನ ಕೊಟ್ಟಿರುತ್ತೇವೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿ ಹೌದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಮಧ್ಯಸ್ಥಗಾರರ ಮುಂದೆ ಯಾವ ದಿನದಂದು ಹಾಗೂ ಎಲ್ಲಿ ತೀರ್ಮಾನ ಆಯಿತು ಎಂದು ದೂರಿನಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಪೋಲಿಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. 70 ಗ್ರಾಂ ಚಿನ್ನ ನಿಮ್ಮ ಬಳಿ ಇತ್ತು ಎಂದು ತೋರಿಸಲು ದೂರು ಕೊಡುವ ಸಮಯದಲ್ಲಿ ರಸೀದಿ ಏನಾದರೂ ಕೊಟ್ಟಿರುತ್ತೀರಾ ಅಥವಾ ಪೋಲಿಸರಿಗೆ ಹೇಳಿಕೆ ನೀಡುವ ಸಮಯದಲ್ಲಿ ರಸೀದಿ ಏನಾದರೂ ಕೊಟ್ಟಿರುತ್ತೀರಾ ಎಂದರೆ ಿಸಾಕ್ಷಿ ಇಲ್ಲ ಮೊದಲೆ ಹೇಳಿಕೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 70 ಗ್ರಾಂ ಚಿನ್ನ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಏನೇನು ಕೊಟ್ಟಿರುತ್ತೀರಾ ಎಂದು

ದೂರಿನಲ್ಲಿ ಅಥವಾ ಹೇಳಿಕೆಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿರುತ್ತೇವೆ ಎಂದು ನುಡಿದು ಮುಂದುವರೆದು ಬ್ರಾಸ್ ಲೈಟ್, ಉಂಗುರ , ಕತ್ತುಚೈನ್ ಎಂದು ನುಡಿಯುತ್ತಾರೆ. ಸದರಿ ಬ್ರಾಸ್ಲೈಟ್, ಉಂಗುರ ಮತ್ತು ಕತ್ತು ಚೈನ್ ಸೇರಿ 70 ಗ್ರಾಂ ಇತ್ತ ಎಂದರೆ ಸಾಕ್ಷಿ ಮಾಂಗಲ್ಯ ಸರ ಸೇರಿ 70 ಗ್ರಾಂ ಎಂದು ನುಡಿಯುತ್ತಾರೆ.

ದೂರನ್ನು ಯಾವ ದಿನಾಂಕ ದಂದು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 23.03.2022 ರಂದು ನುಡಿಯುತ್ತಾರೆ. ದೂರನ್ನು ಕೊಡಲು ಹೋದಾಗ ನಿಮ್ಮ ಜೊತೆ ಯಾರು ಇದ್ದರು ಎಂದರೆ ಸಾಕ್ಷಿ ನಾನು , ನನ್ನ ತಾಯಿ ಹಾಗು ಮಗು ಎಂದು ನುಡಿಯುತ್ತಾರೆ, ಆಗ ಸಮಯ ರಾತ್ರಿ 7.30 ಆಗಿತ್ತು ಎಂದು ನುಡಿಯುತ್ತಾರೆ. ದೂರಿನ ಜೊತೆ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದೂರು ಕೊಟ್ಟ ನಂತರ ಎಷ್ಟು ಭಾರಿ ಪೋಲಿಸರ್ ಠಾಣೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಪ್ರತೀ ದಿನವೂ ಕಂಪ್ಲೆಂಟ್ ಅನ್ನು ಮೂ ಮಾಡುವ ವರೆಗೂ ಹೋಗಿರುತ್ತೆವೆ ಎಂದು ನುಡಿಯುತ್ತಾರೆ, ಅಂದಾಜು ಎಷ್ಟು ದಿನ ಹೋಗಿರುತ್ತೀರಿ ಎಂದರೆ ಸಾಕ್ಷಿ 15.20 ದಿನ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**